

ಕವಿ ಕೆ.ವಿ. ತಿರುಮಲೇಶರು 'ಮುಖಾಮುಖಿ' ಕವಿತೆಯಲ್ಲಿ ಬೆಕ್ಕಿನ ಕಣ್ಣುಗಳಲ್ಲಿ ನಿಶ್ಚಲಭಾವ, ಅನಾಥಪ್ರಜ್ಞೆ ಹಾಗೂ ವಿಷಾದ ಭಾವವನ್ನು ಕಾಣುತ್ತಾರೆ.

ಸಿಪ್ರಸ್‌ನ ಪುರಾತನ ನಗರ ನಿಕೋಸಿಯಾದ ಬೀದಿಗಳಲ್ಲಿ ಬೆಕ್ಕುಗಳ ಬಿಡಾರ



## ನಮ್ಮೂರುಗಳಲ್ಲಿ ಬೀದಿ ನಾಯಿಗಳಿರುವಂತೆ ಸಿಪ್ರಸ್ ದ್ವೀಪರಾಷ್ಟ್ರದ ಬೀದಿಗಳಲ್ಲಿ ಬೆಕ್ಕುಗಳಿವೆ. ಬೆಕ್ಕುಗಳಿಗೆ ಅಲ್ಲಿ ಯಾಕಷ್ಟು ಗೌರವ?

■ ಕೋಡಿಬೆಟ್ಟು ರಾಜಲಕ್ಷ್ಮಿ



ಎಲ್ಲೆಲ್ಲೂ ಬೆಕ್ಕು, ಸ್ಮಶಾನದಲ್ಲೂ ಬೆಕ್ಕು

ಊರಿದ್ದ ಮೇಲೆ ನಾಯಿಗಳೂ ಇರುವುದು ಸಹಜ. ಆದರೆ, ಊರಿದ್ದ ಮೇಲೆ ಬೆಕ್ಕುಗಳು ಇರಲೇಬೇಕು ಎಂದೇನಿಲ್ಲ. ಬೀದಿನಾಯಿಗಳಂತೆ 'ಬೀದಿ ಬೆಕ್ಕುಗಳು' ಎಲ್ಲೆಂದರಲ್ಲಿ ಸುಳಿದಾಡುವುದಿಲ್ಲ. ಆದರೆ, ಸಿಪ್ರಸ್‌ನ ಕಥೆ ಬೇರೆಯೇ. ಇಲ್ಲಿ ಬೀದಿ ತುಂಬ ಬೆಕ್ಕುಗಳದೇ ಸಾಮ್ರಾಜ್ಯ. ನೋಡಿದಲ್ಲೆಲ್ಲ, ಬೆಕ್ಕುಗಳು ಸಾರ್ ಬೆಕ್ಕುಗಳು!

ನಾಯಿಯಾದರೆ ಮನೆಕಾಯುತ್ತದೆ, ಬೆಕ್ಕು ಯಾವ ಕರ್ಮಕ್ಕೆ ಎಂದು ಕೆಲವರು ಮೂಗು ಮುರಿಯುವುದುಂಟು. ಇಲಿ, ಜಿರಲೆ, ಹಲ್ಲಿಗಳಿಂದ ಮನೆ ಮಂದಿಯನ್ನು ಬೆಕ್ಕು ಬಚಾವ್ ಮಾಡುವುದಿಲ್ಲವೇ? ಅದಿರಲಿ, ಮೆಡಿಟರೇನಿಯನ್ ಸಮುದ್ರದಲ್ಲಿರುವ 'ರಿಪಬ್ಲಿಕ್ ಆಫ್ ಸಿಪ್ರಸ್' ಎಂಬ ದ್ವೀಪ ರಾಷ್ಟ್ರದಲ್ಲಿ ಬೆಕ್ಕುಗಳು ನಗರವನ್ನೇ ಕಾಪಾಡುತ್ತವೆಯಂತೆ.

ಸಿಪ್ರಸ್‌ನ ರಾಜಧಾನಿ ನಿಕೋಸಿಯಾ ನಗರದಲ್ಲಿ ಬೆಕ್ಕುಗಳದ್ದೇ ಕಾರುಬಾರು. ರಾಜಗಾಂಭೀರ್ಯದಲ್ಲಿಯೋ, ತುಡುಗು ತುಂಟಾಟದಲ್ಲೋ ಓಡಾಡುತ್ತಿರುವ ಬೆಕ್ಕುಗಳ ಊರದು. ನಗರದ ಉದ್ಯಾನಗಳಲ್ಲಿ ಬೆಂಚು, ರಸ್ತೆಯಂಚು, ಕಾಲುದಾರಿಗಳು, ನೀರಿನ ಟ್ಯಾಂಕು, ಮಿಲಿಟರಿಯಪ್ಪನ ಶೆಡ್ಡು ಎಲ್ಲಿ ನೋಡಿದರೂ ತರಾವರಿ ಬೆಕ್ಕುಗಳು. ಸ್ಮಶಾನದಲ್ಲೂ ಸಮಾಧಿಗಳ ಮೇಲೂ ಬೆಕ್ಕುಗಳು! ಈ ಮಾರ್ಜಾಲ ಬಳಗ ರಸ್ತೆಯಲ್ಲಿ ರಾಜಾರೋಷವಾಗಿ ಓಡಾಡುತ್ತ ವಾಹನಗಳಿಗೆ ಅಡ್ಡನಿಲ್ಲುವುದುಂಟು.

'ಅಯಿಯೊಮಮಿಟಿಸ್' ಎನ್ನುವ ಸಂಸ್ಥೆ ಬೀದಿ ಬೆಕ್ಕುಗಳ ಕಾಳಜಿ ಮಾಡುತ್ತದೆ. ಆ ಸಂಸ್ಥೆಯ ಸದಸ್ಯರ ಪ್ರಕಾರ, ನಿಕೋಸಿಯಾದಲ್ಲಿ ಜನರಿಗಿಂತ ಬೆಕ್ಕುಗಳ ಸಂಖ್ಯೆಯೇ ಹೆಚ್ಚಾಗಿದೆಯಂತೆ. ಈ ಮಾರ್ಜಾಲಸ್ಫೋಟಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ, ಇತ್ತೀಚೆಗಿನ ವರ್ಷಗಳಲ್ಲಿ ಬೆಕ್ಕುಗಳ ಸಂತಾನಹರಣ ಶಸ್ತ್ರ ಚಿಕಿತ್ಸೆಯ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಂಡಿದ್ದು, ವಾರ್ಷಿಕ ಬಜೆಟ್‌ನಲ್ಲಿ 75 ಸಾವಿರ ಯುರೋಗಳನ್ನು ಎತ್ತಿಟ್ಟಿದೆ. 'ಈ ಮೊತ್ತ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯ ಹಾಗಾಯಿತು' ಎಂದು ಸಂಸ್ಥೆ ಹೇಳುತ್ತದೆ.

ಅಂದಹಾಗೆ ಸಿಪ್ರಸ್‌ಗೂ ಬೆಕ್ಕುಗಳಿಗೂ ಪುರಾತನ ನಂಟಿದೆ. ಇದಕ್ಕೆ ಸಾಕ್ಷಿ ಎನ್ನುವಂತೆ ಬೆಕ್ಕುಗಳನ್ನು ಗೌರವಿಸಲು ಅಲ್ಲೊಂದು ಪ್ರಾರ್ಥನಾ ಮಂದಿರ ಇದೆ. 'ಮೊನಾಸ್ಟ್ರಿ ಆಫ್ ಸೇಂಟ್ ನಿಕೋಲಸ್ ಆಫ್ ಕ್ಯಾಟ್ಸ್' ಬಹಳ ಪುರಾತನವಾದ ಮಂದಿರ. ಹೆಲೆನ್ ಆಫ್ ಕಾನ್‌ಸ್ಟಾಂಟಿನೋಪಲ್ ರಾಣಿಯಾಗಿದ್ದಾಗ, ಸಿಪ್ರಸ್‌ನಲ್ಲಿ ಒಂದು ಪ್ರಾರ್ಥನಾ ಮಂದಿರ ನಿರ್ಮಾಣ ಮಾಡಬೇಕು ಎಂದು ಆಶಿಸಿದಳು. ಆದರೆ ವಿಷದ ಹಾವುಗಳ ಕಾಟದಿಂದ ಮಂದಿರ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಬೇಕಾಗಿ ಬಂತು. ಆಗ, ಹಾವುಗಳನ್ನು ನಿಯಂತ್ರಿಸುವುದಕ್ಕಾಗಿ ರಾಣಿ ಒಂದು ದೋಣಿಯ ತುಂಬಾ ಬೆಕ್ಕುಗಳನ್ನು ಕಳುಹಿಸಿದಳು. ಈಜಿಪ್ಟ್ ಮತ್ತು ಪರ್ಷಿಯಾದ ಆ ಬೆಕ್ಕುಗಳು ದೋಣಿಯಿಂದ ಚಂಗನೆ ಜಿಗಿದು, ಹಾವುಗಳನ್ನು ಬೆದರಿಸತೊಡಗಿದವು. ಬೆಕ್ಕುಗಳ ಮೂಲಕ ಹಾವುಗಳ ಕಾಟ ಕಡಿಮೆಯಾಗಿ, ಮಂದಿರ ನಿರ್ಮಾಣದ ಕೆಲಸ ಮುಂದುವರೆಯಿತು. ಆ ಮಂದಿರದಲ್ಲಿ ಪ್ರಾರ್ಥನೆ ಸಂದರ್ಭದಲ್ಲಿ ಮೊಳಗಿಸುವ ತೂಗುಗಂಟೆಯ ಜೊತೆಗೆ, ಬೆಕ್ಕುಗಳನ್ನು ಕರೆಯಲು ಮತ್ತೊಂದು ಪ್ರತ್ಯೇಕವಾದ ಗಂಟೆಯನ್ನೂ ತೂಗುಹಾಕಲಾಗಿದೆ. ಈಗಲೂ ಆ ಮಂದಿರದಲ್ಲಿ ಬೆಕ್ಕುಗಳಿಗೆ ವಿಶೇಷ ಗೌರವ ಸಲ್ಲುತ್ತದೆ.

'ಈ ದ್ವೀಪವನ್ನು ಹಾವುಗಳಿಂದ ರಕ್ಷಿಸಿದ್ದ ಬೆಕ್ಕುಗಳನ್ನು ಎಲ್ಲೆಂದರಲ್ಲಿ ಬಿಡಬೇಡಿ. ಬೀದಿ ಬೆಕ್ಕುಗಳಿಗೆ ದಯವಿಟ್ಟು ಆಹಾರ ಕೊಡಿ' ಎಂದು ಸ್ವಯಂ ಸೇವಾ ಸ್ಥೆಗಳು ಜನರನ್ನು ಕೇಳಿಕೊಳ್ಳುತ್ತಿವೆ. ಜನರೂ ಅಷ್ಟೇ, ಬೆಕ್ಕುಗಳ ಸಂಖ್ಯೆ ಹೆಚ್ಚಾಗಿದೆಯೆಂದು ಜನರೇನೂ ಕೈಗೆ ಬಡಿಗೆ ತೆಗೆದುಕೊಂಡಿಲ್ಲ. ಅನಾಥ ಬೆಕ್ಕುಗಳಿಗೆ ಮೀಸಲಾದ ಆಶ್ರಮಗಳ ಪಕ್ಕದಲ್ಲಿ ಅವುಗಳನ್ನು ಬಿಟ್ಟು ಹೋಗುತ್ತಾರೆ. ಬೆಕ್ಕುಗಳ ನಿಯಂತ್ರಣವಾಗಬೇಕು; ಆದರೆ ಅದು ಮಾನವೀಯ ಕ್ರಮವಾಗಿರಬೇಕು ಎಂದು ಅಲ್ಲಿನ ಜನರು ಹೇಳುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in